ಪ್ರಮೇಯವೇ ಇಲ್ಲದಂಥ ಮಾನವ ದೇಹಗಳನ್ನು ಸೃಷ್ಟಿ ಮಾಡಲು ಅವನಿಗೆ ಸಾಧ್ಯವಿತ್ತಲ್ಲವೆ?

'ಢಣ್... ಢಣ್' ಶಬ್ದಕ್ಕೆ ಯೋಚನಾಲಹರಿಯಿಂದ ಎಚ್ಚೆತ್ತ ವಿಷ್ಣು. ಈ ಶಬ್ದ ಎಲ್ಲೋ ಕೇಳಿದ ಹಾಗಿದೆಯಲ್ಲ ಎನಿಸಿತು. ಸುತ್ತಲೂ ನೋಡಿದ. ಚಿಕ್ಕದಾದ ಒಂದು ದೇವಸ್ಥಾನ... ರಸ್ತೆಗೇ ತೆರೆದುಕೊಂಡಿತ್ತು. ದರುಶನಕ್ಕೆ ಒಳಗೆ ಹೋಗುವಷ್ಟೂ ಸಮಯವಿಲ್ಲದವರಿಗಾಗಿ ನಾಲ್ಕಾರು ಹುಂಡಿಗಳು ರಸ್ತೆಯ ಎರಡೂ ಬದಿಗಳಲ್ಲಿ ರಾರಾಜಿಸುತ್ತಿದ್ದವು. ಅರುವತ್ತು ಬೈ ನಲುವತ್ತು ಫೀಟಿನ ಅಥವಾ ಅದಕ್ಕೂ ಸ್ವಲ್ಪ ಚಿಕ್ಕದೇ ಸೈಜಿನ ಸೈಟಿನಲ್ಲಿ ಕಟ್ಟಿದ್ದ ಸುಂದರ ಕಟ್ಟಡದ ಒಳಗೆ ಉದ್ದಗಲಕ್ಕೆಲ್ಲ ದೇವರುಗಳನ್ನು ವ್ಯವಸ್ಥಿತವಾಗಿ ಕೂಡ್ರಿಸಿದ್ದರು. ಶಿವ, ಗಣಪತಿ, ದೇವಿ, ಹನುಮಂತ, ತಿರುಪತಿ ತಿಮ್ಮಪ್ಪ ಉರುಫ್ ವೆಂಕಟೇಶ, ಸ್ವಾಮಿ ಅಯ್ಯಪ್ಪ ಹಾಗೂ ರಾಘವೇಂದ್ರ ಸ್ವಾಮಿ... ಎಲ್ಲರೆದುರು ವಿವಿಧ ಬಗೆಯ ದೀಪಾಲಂಕಾರಗಳು, ಎದುರು ನೇತಾಡುವ ಮೂರ್ನಾಲ್ಕು ಘಂಟೆಗಳು.. ಜೊತೆಯಲ್ಲೇ ಕಾಣಿಕೆಗಾಗಿ ತಟ್ಟೆಗಳು ಮತ್ತು ಹುಂಡಿಗಳು... ಎಲ್ಲ ದೇವರುಗಳಿಗೆ ಹೇಳಿಕೊಂಡ ಹರಕೆ, ಪೂಜೆ, ಆರತಿಗಳನ್ನು ಮಾಡಿಸಿಕೊಟ್ಟು ತೀರ್ಥ ಪ್ರಸಾದ ಕಟ್ಟಿಕೊಡುವ ಓರ್ವನೇ ಪೂಜಾರಿ... ಕ್ಯಾಶ್ ಕೌಂಟರಿನಲ್ಲಿ ಹಣ ಪಡೆದು ರಸೀದಿ ಹರಿದು ಕೊಡುತ್ತಿದ್ದ ಆತನ ಮಡದಿ. ಆಕೆ ಮಗನನ್ನು ಬಳಿಯಲ್ಲೇ ಕೂರಿಸಿಕೊಂಡು ಹೋಮ್‌ವರ್ಕ್ ಕೂಡ ಮಾಡಿಸುತ್ತಿದ್ದಳು.

ದೇವಸ್ಥಾನದ ಎದುರಿಗೆ ದೊಡ್ಡದಾದ ಆಸ್ಪತ್ರೆಯಿತ್ತು. ಅಲ್ಲಿ ಲಭ್ಯವಿರುವ ಐವತ್ತೋ ಅರವತ್ತೋ ಡಾಕ್ಟರುಗಳ ಹೆಸರಿನ ದೊಡ್ಡ ಬೋರ್ಡು ನೋಡಿದ ವಿಷ್ಣುವಿಗೂ ಸಂದೇಹ ಹುಟ್ಟಿತು... ಇಲ್ಲಿ ಡಾಕ್ಟರುಗಳು ಒಂದೇ ಕಡೆಯಲ್ಲಿದ್ದಾರೆ... ನಾವು ದೇವರುಗಳು? ವಿಶ್ವನಾಥ ಕಾಶಿಯಲ್ಲಿ, ದೇವಿ ಕೊಲ್ಲೂರಲ್ಲಿ, ತಿಮ್ಮಪ್ಪ ತಿರುಪತಿಯಲ್ಲಿ, ಅಯ್ಯಪ್ಪ ಕೇರಳದಲ್ಲಿ ಉಳಕೊಳ್ಳುವ ಅವಶ್ಯಕತೆಯೇನಿದೆ? ಎಲ್ಲಾದರೂ ಒಂದೈದೆಕರೆ ಜಾಗದಲ್ಲಿ ಸರ್ವದೇವ ಮಂದಿರ ಕಟ್ಟಿಕೊಂಡು ಹೀಗೆಯೇ ಒಂದೇ ಕಡೆ ಭಕ್ತರ ಇಷ್ಟಾರ್ಥ ಪೂರೈಸಿಕೊಡುತ್ತ ಇರುವುದು ಒಳ್ಳೆಯದಲ್ಲವೇ? ತಾವ್ಯಾಕೆ ಈ ಬಗ್ಗೆ ಯೋಚಿಸಬಾರದು? ಇದು ಸಾಧ್ಯ ಎಂದು ಸಣ್ಣಮಟ್ಟದಲ್ಲಿ ಪೂಜಾರಿ ವ್ಯವಸ್ಥೆ ಮಾಡಿ ತೋರಿಸಿದ ಉದಾಹರಣೆ ಇಲ್ಲಿಯೇ ಎದುರಲ್ಲಿದೆ!

ಅಪಘಾತದ ಗಾಯಾಳೊಬ್ಬನನ್ನು ಎಲ್ಲಿಂದಲೋ ಹೊತ್ತು ತಂದ ಆಂಬುಲೆನ್ಸ್ ಅರಚಿದ ಸದ್ದಿಗೆ ಹೆದರಿ ಎಚ್ಚೆತ್ತ ವಿಷ್ಣು ರಸ್ತೆ ಬಿಟ್ಟುಕೊಟ್ಟ. ಆಸ್ಪತ್ರೆಯವರು ಚುರುಕಾದರು. ಗಾಯಾಳುವನ್ನು ಸ್ಟ್ರೆಚರಿನಲ್ಲಿ ಒಳಕ್ಕೆ ಸಾಗಿಸಿದವರೊಡನೆ ವಿಷ್ಣುವೂ ಒಳಕ್ಕೆ ಧಾವಿಸಿದ. ಸುಮಾರು ಮೂವತ್ತರ ವಯಸ್ಸಿನ ಹಳ್ಳಿಹೈದ. ತಲೆಗೆ ಏಟಾಗಿತ್ತು.

ನರ್ಸೊಬ್ಬಳು 'ಯಾರ್‍ರೀ ಇವರ ಕಡೆಯವರು?' ಅಂದಳು.

ಹೊತ್ತುತಂದ ನಾಲ್ವರೂ ಮುಖಮುಖ ನೋಡುತ್ತ ಸುಮ್ಮನಿದ್ದರು.

'ನೀವಾ? ನಿಮ್ಮವನೇನ್ರೀ?' ವಿಷ್ಣುವನ್ನು ಕೇಳಿದಳಾಕೆ.

ಅಲ್ಲ ಅಂತ ಹೇಗೆ ಹೇಳುವುದು? ಈ ವಿಶ್ವದ ಸಕಲ ಚರಾಚರ ಜೀವಿಗಳೂ ತನ್ನವರೇ ಅಲ್ಲವೇ? ಹೌದೆಂಬಂತೆ ತಲೆಯಾಡಿಸಿದ ವಿಷ್ಣು.

'ಇಲ್ಲಿ ಬನ್ನಿ, ಇದನ್ನೆಲ್ಲ ಭರ್ತಿ ಮಾಡಿ ಇಲ್ಲಿ ಸಹಿಮಾಡಿ. ಸಹಿ ಇಲ್ಲಾಂದ್ರೆ ಹೆಬ್ಬೆಟ್ಟು ಹಾಕಿಸಿ, ಅಡ್ವಾನ್ಸ್ ಇಪ್ಪತ್ತೈದು ಸಾವಿರ ಕಟ್ಟಿ ರಸೀದಿ ತಂದುಕೊಡಿ, ಕೂಡಲೆ ಚಿಕಿತ್ಸೆ ಆರಂಭಿಸುತ್ತೇವೆ' ಅಂದ ಆಕೆ ಹತ್ತಾರು ಕಾಗದಗಳನ್ನಿತ್ತು ಗಾಯಾಳುವಿನ ಚಿಕಿತ್ಸೆಯ ಸಿದ್ಧತೆಗೆ ಮುಂದಾದಳು. ಆಕೆ ಅತ್ತ ಸರಿಯುತ್ತಲೇ ಪೊಲೀಸರಿಗೆ ಹೆದರಿ ಹೊತ್ತುತಂದ ನಾಲ್ವರೂ ಕಾಲ್ಕಿತ್ತಿದ್ದರು.

ನಾಲ್ಕಾರು ಡಾಕ್ಟರುಗಳು ಬಂದರು. ಪೊಲೀಸರೂ ಬಂದರು. ಅಪಘಾತ ಎಲ್ಲಾಯ್ತು,